ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–1

ಸಂಖ್ಯೆ:ಹೆಚ್.ಆರ್.ಎಂ.ಎಸ್/ಸುತ್ತೋಲೆ–1/2017–18 ದಿನಾಂಕ:05.12.2017

ಸುತ್ತೋಲೆ

ವಿಷಯ: ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ನೌಕರರ ಪ್ರಥಮ ಕೆಜಿಐಡಿ ಸಂಖ್ಯೆಯನ್ನು ಸರಿಪಡಿಸಿಕೊಳ್ಳುವ ಬಗ್ಗೆ.

&&&

ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ಇಲಾಖೆಯ ಬಹಳಷ್ಟು ನೌಕರರ ಪ್ರಥಮ ಕೆಜಿಐಡಿ ಸಂಖ್ಯೆಯು ತಪ್ಪಾಗಿ ನಮೂದಾಗಿರುವುದು ಕಂಡು ಬಂದಿರುತ್ತದೆ. ತಪ್ಪಾಗಿ ನಮೂದಾಗಿರುವ ಕೆಜಿಐಡಿ ಸಂಖ್ಯೆಗಳನ್ನು ತಿದ್ದುಪಡಿ ಮಾಡುವ ಸಲುವಾಗಿ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಇ–ಮೇಲ್ ಮೂಲಕ ಮಾಹಿತಿ ಕಳುಹಿಸಲಾಗಿದ್ದರೂ ಸಹ ಕೆಲವು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಂದ ಮಾತ್ರ ಕ್ರಮವಹಿಸಲಾಗಿರುತ್ತದೆ. ಹೆಚ್.ಆರ್.ಎಂ.ಎಸ್ ನಲ್ಲಿ ತಪ್ಪಾಗಿ ನಮೂದಾಗಿರುವ ಕೆಜಿಐಡಿ ಸಂಖ್ಯೆಗಳು ಶಿಕ್ಷಕರ ಸೇವಾ ಮಾಹಿತಿ (ಟಿಡಿಎಸ್) ಯೊಂದಿಗೆ ತಾಳೆ ಹೊಂದುತ್ತಿಲ್ಲ. ಈ ತಂತ್ರಾಂಶವನ್ನು (ಟಿಡಿಎಸ್) ಮುಂದೆ ಶಿಕ್ಷಕರುಗಳ ವರ್ಗಾವಣೆಗೆ ಬಳಸಲಾಗುವುದರಿಂದ ಎಲ್ಲಾ ವೇತನ ಸೆಳೆಯುವ ಅಧಿಕಾರಿಗಳು ಈ ಕೆಳಕಂಡಂತೆ ಕ್ರಮವಹಿಸಿ ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ತಮ್ಮ ನೌಕರರುಗಳ ಕೆಜಿಐಡಿ ಸಂಖ್ಯೆಯನ್ನು ತಿದ್ದುಪಡಿ ಮಾಡಿಕೊಳ್ಳುವಂತೆ ತಿಳಿಸಿದೆ.

1. ಎಲ್ಲಾ ನೌಕರರುಗಳ ಪ್ರಥಮ ಕೆಜಿಐಡಿ ಬಾಂಡ್‌ನ ಪ್ರತಿಯನ್ನು ಪಡೆದು ಪರಿಶೀಲಿಸಿ.
2. ನಿಮ್ಮ (ಡಿಡಿಓ) ಲಾಗಿನ್‌ನಲ್ಲಿ payroll-Insurance details ನಲ್ಲಿ ಕೆಜಿಐಡಿ ಸಂಖ್ಯೆಯು ತಪ್ಪಿದ್ದಲ್ಲಿ ಎಡಿಟ್ ಮಾಡಿ ಅಪ್‌ಡೇಟ್ ಮಾಡಿಕೊಳ್ಳಿರಿ.
3. ಕೆಜಿಐಡಿ ಕೇಂದ್ರ ಕಛೇರಿ, 17ನೇ ಮಹಡಿ, ವಿಶ್ವೇಶ್ವರಯ್ಯ ಕೇಂದ್ರದ ಮುಖ್ಯ ಗೋಪುರ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು–1 (ದೂರವಾಣಿ ಸಂಖ್ಯೆ.08022536176, 08022536178 e-mail:directorkgid17@gmail.com) ಇವರನ್ನು ಸಂಪರ್ಕಿಸಿ ನೌಕರರ ಸರಿಯಾದ ಕೆಜಿಐಡಿ ಸಂಖ್ಯೆಯನ್ನು ಕೆಜಿಐಡಿ ಮಾಸ್ಟರ್ ಟೇಬಲ್‌ನಲ್ಲಿ ಅಪ್‌ಡೇಟ್ ಮಾಡಿಸಿ.
4. ಈ ಪತ್ರಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ನೌಕರರುಗಳ ಮಾಹಿತಿಯನ್ನು ನಮೂದಿಸಿ, ದೃಢೀಕೃತ ಕೆಜಿಐಡಿ ಬಾಂಡ್‌ನೊಂದಿಗೆ ನೋಡಲ್ ಅಧಿಕಾರಿಗಳು, ಹೆಚ್.ಆರ್.ಎಂ.ಎಸ್. ವಿಭಾಗ, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–1 ವಿಳಾಸಕ್ಕೆ ಪತ್ರ ಬರೆಯಿರಿ.

ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಡಿಸೆಂಬರ್ ಅಂತ್ಯದೊಳಗೆ ಇತ್ಯರ್ಥಪಡಿಸಿಕೊಳ್ಳುವಂತೆ ಮತ್ತೊಮ್ಮೆ ತಿಳಿಸುತ್ತಾ, ಡಿಸೆಂಬರ್ ನಂತರ ಬರುವ ಮನವಿಗಳನ್ನು ಪುರಸ್ಕರಿಸಲಾಗುವುದಿಲ್ಲ ಮತ್ತು ಮುಂದಿನ ಆಗುಹೋಗುಗಳಿಗೆ ಡಿಡಿಓರವರೇ ಜವಾಬ್ದಾರರಾಗಿರುತ್ತಾರೆಂದು ಸ್ಪಷ್ಟಪಡಿಸಿದೆ.

[ಎಸ್. ಕಾತ್ಯಾಯಿನಿ ದೇವಿ]
ಜಂಟಿ ನಿರ್ದೇಶಕರು [ಆಡಳಿತ]

ಗೆ:

1. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾಶಿಇ, ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಿಗೆ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರ ಮುಖಾಂತರ.

\\10.96.135.110\shared file\sai ram\67_17.doc

## ನಮೂನೆ

ವಿಷಯ : ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ನೌಕರರ ಪ್ರಥಮ ಕೆಜಿಐಡಿ ಸಂಖ್ಯೆಯನ್ನು ಸರಿಪಡಿಸಿಕೊಳ್ಳುವ ಬಗ್ಗೆ.

ಕಛೇರಿ ವಿಳಾಸ :

ದೂರವಾಣಿ ಸಂಖ್ಯೆ:

ಡಿಡಿಓ ಕೋಡ್:

ಇ-ಮೇಲ್ ವಿಳಾಸ:

| ಕ್ರಸಂ | ನೌಕರರ ಹೆಸರು | ತಪ್ಪಾಗಿ ನಮೂದಾಗಿರುವ ಕೆಜಿಐಡಿ ಸಂಖ್ಯೆ (ಪ್ರಸ್ತುತ HRMS ನಲ್ಲಿರುವಂತೆ) | ಸರಿಯಾದ ಕೆಜಿಐಡಿ ಸಂಖ್ಯೆ | ಮಾಸ್ಟರ್ ಟೇಬಲ್‌ನಲ್ಲಿ ಅಪ್‌ಡೇಟ್ ಆಗಿದೆಯೇ? | Payroll->Insurance details ನಲ್ಲಿ ತಿದ್ದುಪಡಿ ಆಗಿದೆಯೇ? | ಷರಾ |
|---|---|---|---|---|---|---|
| | | | | | | |
| | | | | | | |
| | | | | | | |

ಡಿಡಿಓ ಸಹಿ & ಮೊಹರು